# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 78 (3) |
| ಸದಸ್ಯರ ಹೆಸರು: | ಶ್ರೀ ಎನ್.ರವಿಕುಮಾರ್ ( ವಿಧಾನ ಸಭೆಯಿಂದ ಚುನಾಯಿತರಾದವರು ) |
| ಉತ್ತರಿಸಬೇಕಾದ ದಿನಾಂಕ: | 12.09.2022 |
| ಉತ್ತರಿಸಬೇಕಾದ ಸಚಿವರು: | ಪ್ರಾಥಮಿಕ ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2016-17ನೇ ಸಾಲಿನಲ್ಲಿ ಪಠ್ಯ ಪುಸ್ತಕ ಮುದ್ರಣದಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ರೂ.8 ಕೋಟಿಗೂ ಹೆಚ್ಚಿನ ಮೊತ್ತದ ಭ್ರಷ್ಟಾಚಾರ ನಡೆದಿರುವ ಕುರಿತು ಸರ್ಕಾರದ ನಿಲುವೇನು; ಈ ಕುರಿತು ತನಿಖೆಗಾಗಿ ಎ ಸಿ ಬಿ ದಾಖಲೆಗಳನ್ನು ನೀಡುವಂತೆ ಪದೇ ಪದೇ ಪತ್ರ ಬರೆಯುತ್ತಿದ್ದರೂ ಇಲಾಖೆ ವತಿಯಿಂದ ದಾಖಲೆಗಳನ್ನು ನೀಡದಿರಲು ಕಾರಣಗಳೇನು; (ವಿವರ ನೀಡುವುದು) | ಬಂದಿದೆ.<br>ಸರ್ಕಾರದ ಪತ್ರ ಸಂಖ್ಯೆ: ಇಡಿ 26 ಡಿಜಿಪಿ 2019 ದಿನಾಂಕ:14/6/2019ರ ಪತ್ರದಲ್ಲಿ ಶ್ರೀ ಸಾಯಿದತ್ತ, ಸಾಮಾಜಿಕ ಕಾರ್ಯಕರ್ತರು, ಬೆಂಗಳೂರು ಇವರು ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ಸಲ್ಲಿಸಿದ್ದು, ಸದರಿ ದೂರಿನ ಅಂಶಗಳ ಬಗ್ಗೆ ದಾಖಲೆಗಳನ್ನು ಒದಗಿಸಲು ತಿಳಿಸಲಾಗಿತ್ತು. ಸದರಿ ವರದಿಯ ಬಗ್ಗೆ ಪೂರ್ಣ ಪ್ರಮಾಣದಲ್ಲಿ ದಾಖಲೆಗಳನ್ನು ಪರಿಶೀಲಿಸಲು ಆಯುಕ್ತರ ಕಛೇರಿಯ ಲೆಕ್ಕಶಾಖೆಯ ಅಧಿಕಾರಿಗಳ ತಂಡವನ್ನು ನಿಯೋಜಿಸಲಾಗಿತ್ತು.<br><br>ಲೆಕ್ಕ ತಪಾಸಣಾ ತಂಡವು ಪರಿಶೀಲನಾ ಸಂದರ್ಭದಲ್ಲಿ ಕೋರಿರುವ ಎಲ್ಲಾ ದಾಖಲೆಗಳನ್ನು ಹಾಗೂ ಹೆಚ್ಚುವರಿ ದಾಖಲೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದು ತಪಾಸಣಾ ತಂಡಕ್ಕೆ ಒದಗಿಸಲಾಗಿರುತ್ತದೆ.<br><br>ತಪಾಸಣಾ ತಂಡವು ನೀಡಿದ್ದ ಎಲ್ಲಾ ಅಗತ್ಯ ದಾಖಲೆಗಳನ್ನು ಹಾಗೂ ಆಕ್ಷೇಪಣೆಗಳಿಗೆ ನೀಡಿರುವ ಅನುಸರಣಾ ವರದಿಯನ್ನು ಕರ್ನಾಟಕ ಪಠ್ಯಪುಸ್ತಕ ಸಂಘ ಹಾಗೂ ಆಯುಕ್ತಾಲಯವು ಪರಿಶೀಲಿಸಿ, ಪರಿಶೀಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರವು ಸದರಿ ವರದಿಯನ್ನು ಲೋಕಾಯುಕ್ತ ಸಂಸ್ಥೆಗೆ ತನಿಖೆಗಾಗಿ ಒಳಪಡಿಸುವ ಕುರಿತಂತೆ ಪರಿಶೀಲಿಸಲಾಗುತ್ತಿದೆ. |
| ಆ) | 2016-17ನೇ ಸಾಲಿನಲ್ಲಿ ಪಠ್ಯ ಪುಸ್ತಕ ಮುದ್ರಣವನ್ನು 60 ಜಿಎಸ್ಎಂ ಪೇಪರಿನಲ್ಲಿ ಮುದ್ರಿಸಬೇಕೆಂದು ಸೂಚಿಸಿದ ಬಳಿಕವೂ 50 ಜಿ ಎಎಸ್ ಎಂ ಪೇಪರಿನಲ್ಲಿ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಕಳಪೆ ಗುಣಮಟ್ಟದ ಪಠ್ಯ ಪುಸ್ತಕಗಳನ್ನು ಮಕ್ಕಳಿಗೆ ವಿತರಿಸಿರುವ ಮುದ್ರಕರ ಮೇಲೆ ಮತ್ತು ಈ ಅವ್ಯವಹಾರವನ್ನು ನಡೆಸಿದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿರಲು ಕಾರಣವೇನು; (ವಿವರ ನೀಡುವುದು) | 2016-17ನೇ ಸಾಲಿನ ಪಠ್ಯಪುಸ್ತಕಗಳ ಮುದ್ರಣ ಮತ್ತು ಸರಬರಾಜು ಟೆಂಡರ್‌ನಲ್ಲಿ 60 ಜಿ.ಎಸ್.ಎಂ ಕಾಗದ ಬಳಕೆ ಮಾಡಿ ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್ ಅಧಿಸೂಚಿಸಿ ಸರ್ಕಾರದ ಆದೇಶ ಸಂಖ್ಯೆ: ಇಡಿ 207 ಯೋಯೋಕ. 2014, ಬೆಂಗಳೂರು ದಿನಾಂಕ:01/01/2015ರ ಆದೇಶದನ್ವಯ ಕ್ರಮವಹಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ). |

| | | |
|---|---|---|
| ಇ) | ಆಂದ್ರದ ಪ್ರಿಂಟಿಂಗ್ ಕಂಪನಿಯವರು ಸರಿಯಾದ ರೀತಿಯಲ್ಲಿ ಪುಸ್ತಕಗಳನ್ನು ಮುದ್ರಣ ಮಾಡಿಲ್ಲ ಎಂಬ ಕಾರಣಕ್ಕೆ ದಂಡವನ್ನು ವಿಧಿಸಿದ ಬಳಿಕವೂ ಸದರಿ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸದೆ ಪ್ರತಿ ವರ್ಷ 1 ಪ್ಯಾಕೇಜ್ ನೀಡುವ ಜಾಗದಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ 3 ಪ್ಯಾಕೇಜ್‌ಗಳನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳಪೆ ಗುಣಮಟ್ಟ ಪಠ್ಯ ಪುಸ್ತಕಗಳನ್ನು ಒದಗಿಸಿರುವ ಕಾರಣಕ್ಕಾಗಿ ಪ್ರತಿ ವರ್ಷ ನೀಡುತ್ತಿದ್ದ 1 ಪ್ಯಾಕೇಜನ್ನು ಈ ವರ್ಷ 3ಕ್ಕೆ ಹೆಚ್ಚಿಸಿ ನೀಡಲಾಗಿದೆಯೆ; ಈ ಕುರಿತು ಸರ್ಕಾರದ ನಿಲುವೇನು; ಸರ್ಕಾರವು ಕಳಪೆ ಗುಣಮಟ್ಟ ಪಠ್ಯ ಪುಸ್ತಕಗಳನ್ನು ಒದಗಿಸಿರುವ ಸಂಸ್ಥೆಗೆ ಪ್ರೋತ್ಸಾಹ ನೀಡಲು ಕಾರಣವೇನು? (ವಿವರ ನೀಡುವುದು) | ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು ರವರು ದಿನಾಂಕ: 24-11-2016 ರಂದು ಮೆ\|\| ಬ್ರುಹ್ಮತೇಜ ಪೇಪರ್ ಪ್ರಾಡಕ್ಟ್ಸ್, ಹೈದರಾಬಾದ್ ಸಂಸ್ಥೆಯನ್ನು 05 ವರ್ಷಗಳ ಅವಧಿಗೆ ಕಪ್ಪು ಪಟ್ಟಿಗೆ ಸೇರಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.(ಪ್ರತಿ ಲಗತ್ತಿಸಿದೆ)<br><br>2022-23ನೇ ಶೈಕ್ಷಣಿಕ ಸಾಲಿಗೆ ವಿದ್ಯಾ ವಿಕಾಸ ಯೋಜನೆಯಡಿ ಪಠ್ಯಪುಸ್ತಕಗಳ ಮುದ್ರಣ ಮತ್ತು ಇತರೆ ಮುದ್ರಣ ಕಾರ್ಯದ ಟೆಂಡರ್ ಪ್ರಕ್ರಿಯೆಯನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತಗೊಂಡಿರುವ ಹಾಗೂ ಮುದ್ರಣ ಸೌಲಭ್ಯ ಹೊಂದಿರುವ ಮುದ್ರಣಾಕಾರರಿಗೆ ಸೀಮಿತಗೊಳಿಸಿ ಅನುಷ್ಠಾನಗೊಳಿಸತಕ್ಕದ್ದು ಎಂದು ಸರ್ಕಾರದ ಆದೇಶ ಸಂಖ್ಯೆ: ಇಪಿ 40 ಎಂ.ಪಿ.ಇ. 2021 ದಿನಾಂಕ:22/12/2021ರಲ್ಲಿ ಆದೇಶಿಸಿದ್ದು, ಸದರಿ ಆದೇಶದಂತೆ ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು ರವರಿಂದ ಕ್ರಮವಹಿಸಲಾಗಿರುತ್ತದೆ. (ಆದೇಶದ ಪ್ರತಿ ಲಗತ್ತಿಸಿದೆ). |

ಸಂಖ್ಯೆ: ಇಪಿ 299 ಪಿಎಂಸಿ 2022

( ಬಿ.ಸಿ.ನಾಗೇಶ್ )
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2015-16ನೇ ಸಾಲಿನ ಶಾಲಾ ಪಠ್ಯ ಪುಸ್ತಕಗಳ ಮುದ್ರಣಕ್ಕೆ 70 ಜಿ.ಎಸ್.ಎಂ ಕಾಗದ ಬಳಕೆಗೆ ಅನುಮತಿ ನೀಡುವ ಬಗ್ಗೆ.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ ಇವರ ಪತ್ರ ಸಂಖ್ಯೆ:ಎ7/ಕ ಪ.ಪು.ಸಂ/ಸಭೆ/ನಂ.84/2013-14, ದಿನಾಂಕ.05-12-2014

**ಪ್ರಸ್ತಾವನೆ:**

ಮೇಲೆ ಓದಲಾದ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ ಇವರ ಪತ್ರದಲ್ಲಿ 2014-15ನೇ ಶೈಕ್ಷಣಿಕ ಸಾಲಿನ ಪಠ್ಯಪುಸ್ತಕಗಳ ಮುದ್ರಣಕ್ಕೆ 60 ಜಿ.ಎಸ್.ಎಂ. ಕಾಗದದ ಬದಲಿಗೆ 70 ಜಿ.ಎಸ್.ಎಂ ಕಾಗದ ಬಳಕೆ ಮಾಡಲಾಗಿದ್ದು, ಇದೇ ರೀತಿ 2015-16ನೇ ಶೈಕ್ಷಣಿಕ ಸಾಲಿಗೆ ಮತ್ತು ನಂತರದ ಶೈಕ್ಷಣಿಕ ವರ್ಷಗಳಲ್ಲಿ ಪಠ್ಯಪುಸ್ತಕಗಳ ಮುದ್ರಣಕ್ಕೆ 70 ಜಿ.ಎಸ್.ಎಂ ಕಾಗದವನ್ನೇ ಬಳಸಬೇಕಾಗುತ್ತದೆಂಬುದಕ್ಕೆ ಸಮರ್ಥನೀಯ ಕಾರಣಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿ, ಸರ್ಕಾರದ ಅನುಮತಿಯನ್ನು ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಇಡಿ 207 ಯೋಯೋಕ 2014, ಬೆಂಗಳೂರು, ದಿನಾಂಕ:01/01/2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015-16ನೇ ಶೈಕ್ಷಣಿಕ ಸಾಲಿನ ಪಠ್ಯಪುಸ್ತಕಗಳ ಮುದ್ರಣಕ್ಕೆ ಈಗಾಗಲೇ ಟೆಂಡರ್ ಕರೆದು ಅಂತಿಮಗೊಳಿಸಿರುವುದರಿಂದ ಈ ವರ್ಷಕ್ಕೆ ಮಾತ್ರ 70 ಜಿ.ಎಸ್.ಎಂ ಕಾಗದವನ್ನು ಉಪಯೋಗಿಸಿ ಪಠ್ಯಪುಸ್ತಕಗಳನ್ನು ಮುದ್ರಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ. ಇದಕ್ಕೆ ಬೇಕಾದ ಹೆಚ್ಚುವರಿ ಅನುದಾನವನ್ನು ಶಿಕ್ಷಣ ಇಲಾಖೆಯ ಉಳಿತಾಯದಿಂದಲೇ ಭರಿಸುವುದು.

ಪ್ರತಿ ವರ್ಷವೂ ಪಠ್ಯಪುಸ್ತಕಗಳನ್ನು ಮುದ್ರಿಸಿ ಕೊಡುತ್ತಿರುವುದರಿಂದ 70 ಜಿ.ಎಸ್.ಎಂ ಕಾಗದ ಉಪಯೋಗಿಸುವ ಅವಶ್ಯಕತೆ ಇಲ್ಲ. ಮುಂದಿನ ವರ್ಷದಿಂದ (2016-17ನೇ ಸಾಲಿನಿಂದ) 60 ಜಿಎಸ್ಎಂ. ಕಾಗದ ಉಪಯೋಗಿಸಿ ಪಠ್ಯ ಪುಸ್ತಕಗಳನ್ನು ಮುದ್ರಿಸಲು ಕ್ರಮವಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1302 ವೆಚ್ಚ-8/2014, ದಿನಾಂಕ:23.12.2014 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ.ಎಫ್.ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಇವರಿಗೆ:

1. ಮಹಾಲೇಖಪಾಲರು, (ಆಡಿಟ್ I & 2) ಕರ್ನಾಟಕ, ಬೆಂಗಳೂರು.
2. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

....2

Scanned with CamScanner

(S27)

Government of Karnataka
(Department of Public Instruction)

Phone : 080-26422238/45
Fax : 080-26421199
Email : textbooksociety@gmail.com
Website: http://www.schooleducation.kar.nic.in

Karnataka Textbook Society (R)
No. 4, DSERT Building,
100ft Ring Road,
Banashankari 3rd Stage,
Bangalore-560 085.

No: A7KTBS/Printing Progress-104/2015-16.

Date: 24-11-2016

# NOTIFICATION

**Sub :** Prohibiting M/S Bramha Teja paper products Hyderabad for not full filling the tender conditions for the year 2016-17.

**Ref:**
1. This office Tender notification No.A7/KTBS/2016-17/ TBP/Tender/01/2015-16.Dated: 03-10-2015
2. This Office Purchase order No. A7/KTBS/2016-17.TBP-Tender-01/ 2015-16. Date:12-01-2016 .
3. This office Notice even No. dated:03/03/2016, on the basis of the visit Report by Managing Director and Director, Government Press.
4. This office Notice even No and Dated: 28/03/2016 on the basis of the visit Report of SADPI of KTBS.
5. This office Notice even No. Dated 22/06/2016 and 09/8/2016.
6. Your Replies to this office show cause Notice No. Dated: 04/10/2016

~~~~\*\*\*\*~~~~

**PREAMBLE:-**

Tender Notification for printing and supply of school text books for the academic year 2016-17 has been floated through e-portal under reference-1 above. Eligible bidders among the southern region were invited to participate in the tender process. The M/s Brahma Teja Paper Products, Hyderabad has participated in the said tender and has been declared successful bidder for package-15, 16, 43 & 51. M/s Brahma Teja Paper Products, Hyderabad has been awarded work order



Scanned with CamScanner
~~~~

vide ref-2 above for printing and supply of school Text book specified in package 15, 16, 43 & 51 as per the tender conditions and the MOU executed on 03-02-2016.

As per the clause 8.10 of tender document and delivery schedule specified in MOU and work order clearly says that the printer has to supply the school text books within 120 days from the date of issue of work order.

In the present case the work order was issued on 12-01-2016 as referred 2 above. M/s Brahma Teja Paper Products, Hyderabad has to complete the tender/work order obligation within 10-05-2016. M/s Brahma Teja Paper Products, Hyderabad has to supply 28,97,935 (724940+817411+545546+810038) text books within 10-05-2016, where as it has supplied only **36.57% of text books i.e., 10,59,810** (239800+335811+182531+301668) within the scheduled date, and submitted a bill on 25/04/2016 & 18/06/2016 for payment for the 63.72% text books supplied i.e., 18,46,482 (451216+526289+ 332115+536862) for which Karnataka Text Book Society has made the payment of Rs. 3,10,65,602/- (Rs.95,46,883/- + Rs.90,15,296/- + Rs51,69,887 + Rs73,33,536/-) In two installments as per the bills submitted by the M/s Brahma Teja Paper Products, Hyderabad.

Out the remaining text books M/s Brahma Teja Paper Products, Hyderabad has only supplied 925518 (235183+262702+177119+250514) text books, and the remaining 127506 (38541+28420+37907+22638) text books were not supplied till date. **Out of the non supplied text books not even a single book has been printed in THREE titles which are minor languages and minor medium text books.** Due to this the students suffered learning activities in those subjects, the hardship caused to the students cannot be made good in any way. **M/s Brahma Teja Paper Products, Hyderabad is sole responsible for the hardship caused to the students.**



Scanned with CamScanner

(526)



During the course of production several visits have been made by the officers of the KTBS and the Director of Printing & Stationary, who is the third party to monitor the quality and printing process. During these visits it is found that M/s Brahma Teja Paper Products, Hyderabad lagging much behind the scheduled target on the day of visits. The officers has reported that if M/s Brahma Teja Paper Products, Hyderabad continue the same pace of printing process, it is very difficult to complete the printing and supply of the school text books within the schedule period.

Based on the visit reports submitted by the authorized officers, notices were issued to M/s Brahma Teja Paper Products, Hyderabad vide ref: 3&4 and suggested to improve and speedup the rate of production so that the work order obligation is fulfilled within the schedule date. Even after these measures taken by the KTBS, has shown no improvement in the process of printing and supply of school text books. M/s Brahma Teja Paper Products, Hyderabad has failed to supply the required school text books even after the commencement of the academic year. Due to this KTBS has to face anguish from all quarters of the society for not supplying the school text books on time to the students.

Due to the failure on the part of the M/s Brahma Teja Paper Products, Hyderabad in fulfilling the tender obligation, the credibility, reputation and dignity of the KTBS in particular and Government has put to stake which was irrevocable.

The situation created as per the facts mentioned above, a show cause was issued by giving final opportunity to fulfil the tender/work order obligation within 20th August 2016 or otherwise suitable action will be initiated as per the tender clause. In reply to the show cause notice M/s Brahma Teja Paper Products, Hyderabad has submitted their response on 04-10-2016 and accepted the delay and non supply of school text books within the schedule period and the extended period. The reason quoted by M/s Brahma Teja Paper Products, Hyderabad for non fulfillment of the work order obligation was due to non receipt of raw materials from their suppliers which cannot be accepted. It is the duty of the M/s Brahma Teja Paper Products, Hyderabad to procure the raw materials from any other



Scanned with CamScanner

source and not depending on any one suppliers. Hence the reason quoted by the M/s Brahma Teja Paper Products, Hyderabad for non fulfillment of work order obligation is not acceptable to the Karnataka Text Book Society.

Acceptance of delay and violation of tender conditions by M/s Brahma Teja Paper Products, Hyderabad has proved beyond doubt that M/s Brahma Teja Paper Products, Hyderabad has breached the tender contract. As per 8.19 of tender clause the purchaser ie., Karnataka Text Book Society has the powers to terminate the contract whole or part thereof. Hence the following order.

**ORDER**:-

As explained above its proved beyond doubt that M/s Brahma Teja Paper Products, Hyderabad has breached the tender contract, and at the same time the M/s Brahma Teja Paper Products, Hyderabad has accepted the breach of contract. Hence as per 8.19 of the tender clause the tender contract between Karnataka Text Book Society, Bengaluru and M/s Brahma Teja Paper Products, Hyderabad executed on 03-02-2016 stands partially terminated from immediate effect. M/s Brahma Teja Paper Products, Hyderabad has been debarred from participating in any of the tender process for a period of five years from immediate effect.

Managing Director
Karnataka Text Book Society
Bangalore.

To
*M/S Bramha Teja Paper Products,*
*# 11-9-130/3/c Road no. 3A,*
*Laxminagira colony, Isothapet, Hyderabad,*
*Andhra Pradesh.*



Scanned with CamScanner

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : 2022-23ನೇ ಶೈಕ್ಷಣಿಕ ಸಾಲಿಗೆ ವಿದ್ಯಾವಿಕಾಸ ಯೋಜನೆಯಡಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: A7/ಸ.ವ.ಮು.ಸಂ/ ಕ್ಯಾಬಿನೆಟ್. ಅನು/24/2021-22.

******

ಪ್ರಸ್ತಾವನೆ:

ಮೇಲೆ ಓದಲಾದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಏಕ ಕಡತದಲ್ಲಿ, ವಿದ್ಯಾರ್ಥಿಗಳ ಹಾಜರಾತಿಯನ್ನು ಉತ್ತಮ ಪಡಿಸಲು ಪ್ರೋತ್ಸಾಹದಾಯಕ ಯೋಜನೆಯಂತೆ ವಿದ್ಯಾವಿಕಾಸ ಕಾರ್ಯಕ್ರಮದಡಿ ಪ್ರತಿ ವರ್ಷದಂತೆ 2022-23 ಸಾಲಿಗೆ ಸರ್ಕಾರಿ ವಿದ್ಯಾರ್ಥಿಗಳಿಗೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ ಪುಸ್ತಕಗಳನ್ನು ವಿತರಿಸಲು, ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸುವ ಉದ್ದೇಶದಿಂದ 1ನೇ ತರಗತಿಯಿಂದ 3ನೇ ತರಗತಿಗಳ ನಲಿ-ಕಲಿ ಘಟಕಗಳಿಗೆ ಹವಾಮಾನ ನಕ್ಷೆ ಮತ್ತು ಪ್ರಗತಿ ನೋಟ ವಿತರಿಸಲು ಉದ್ದೇಶಿಸಿರುವುದಾಗಿ ತಿಳಿಸಿರುತ್ತಾರೆ.

| ಕ್ರಮ ಸಂಖ್ಯೆ | ಅಂಶಗಳು | ಫಲಾನುಭವಿ ಮಕ್ಕಳ ಸಂಖ್ಯೆ (ಅಂದಾಜು) | ವೆಚ್ಚ ( ರೂಪಾಯಿ ಕೋಟಿಗಳಲ್ಲಿ ಅಂದಾಜು) |
|---|---|---|---|
| 1. | ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಗಳನ್ನು ಒದಗಿಸಲು. | 59.30 ಲಕ್ಷಗಳು | ರೂ. 152.81 |
| 2. | 1 ರಿಂದ 3ನೇ ತರಗತಿ ನಲಿ-ಕಲಿ ಘಟಕಗಳಿಗೆ ಹವಾಮಾನ ನಕ್ಷೆ ಮತ್ತು ಪ್ರಗತಿ ನೋಟ ವಿತರಿಸಲು. ಪಠ್ಯಪುಸ್ತಕ ರಚನಾ ಕಾರ್ಯಾಗಾರ, ಸಾಗಾಣಿಕೆ ವೆಚ್ಚ ಮತ್ತು ವೇತನೇತರ ಇತರೆ ವೆಚ್ಚಗಳು | 63984 ಶಾಲೆಗಳು | ರೂ. 5.34 |
| | ಒಟ್ಟು ಮೊತ್ತ | | ರೂ. 158.21 |

27
22/12/2021

Scanned with CamScanner

Scanned with CamScanner

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 40 ಎಂಪಿಇ 2021,ಬೆಂಗಳೂರು,**

**ದಿನಾಂಕ:22.12.2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23 ನೇ ಸಾಲಿನ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯ ಪುಸ್ತಕಗಳನ್ನು ವಿತರಿಸಲು, ಶೈಕ್ಷಣಿಕ ಗುಣಮಟ್ಟವನ್ನು ಉತ್ತಮಪಡಿಸುವ ಉದ್ದೇಶದಿಂದ 1ನೇ ತರಗತಿಯಿಂದ 3ನೇ ತರಗತಿಗಳ ನಲಿ-ಕಲಿ ಘಟಕಗಳಿಗೆ ಹವಾಮಾನ ನಕ್ಷೆ ಮತ್ತು ಪ್ರಗತಿ ನೋಟ ವಿತರಿಸಲು ಈ ಕೆಳಕಂಡ ಅಂಶಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

| ಕ್ರಮ ಸಂಖ್ಯೆ | ಅಂಶಗಳು | ಫಲಾನುಭವಿ ಮಕ್ಕಳ ಸಂಖ್ಯೆ (ಅಂದಾಜು) | ವೆಚ್ಚ ( ರೂಪಾಯಿ ಕೋಟಿಗಳಲ್ಲಿ ಅಂದಾಜು) |
|---|---|---|---|
| 1. | ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 1ನೇ ತರಗತಿಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಪಠ್ಯಪುಸ್ತಗಳನ್ನು ಒದಗಿಸಲು. | 59.30 ಲಕ್ಷಗಳು | ರೂ. 152.81 |
| 2. | 1 ರಿಂದ 3ನೇ ತರಗತಿ ನಲಿ-ಕಲಿ ಘಟಕಗಳಿಗೆ ಹವಾಮಾನ ನಕ್ಷೆ ಮತ್ತು ಪ್ರಗತಿ ನೋಟ ವಿತರಿಸಲು, ಪಠ್ಯಪುಸ್ತಕ ರಚನಾ ಕಾರ್ಯಗಾರ, ಸಾಗಾಣಿಕೆ ವೆಚ್ಚ ಮತ್ತು ವೇತನೇತರ ಇತರೆ ವೆಚ್ಚಗಳು | 63984 ಕಾರ್ಡುಗಳು | ರೂ. 5.34 |
| | ಒಟ್ಟು ಮೊತ್ತ | | ರೂ. 158.21 |

ಸದರಿ ಕಾರ್ಯಕ್ರಮವನ್ನು ನಿಯಮಾನುಸಾರ ಅನುಷ್ಠಾನಗೊಳಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಅನುಮತಿ ನೀಡಿ ಆದೇಶಿಸಿದೆ.

ಸದರಿ ಅನುಮೋದಿತ ಅನುದಾನದ ಮಿತಿಯೊಳಗೆ 2022-23ನೇ ಶೈಕ್ಷಣಿಕ ಸಾಲಿನ ಪ್ರಾರಂಭದಲ್ಲಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.



Scanned with CamScanner

Scanned with CamScanner

ಪಠ್ಯಪುಸ್ತಕಗಳ ಮುದ್ರಣ ಹಾಗೂ ಇತರೆ ಮುದ್ರಣ ಕಾರ್ಯದ ಟೆಂಡರ್ ಪ್ರಕ್ರಿಯೆಯನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತಗೊಂಡಿರುವ ಹಾಗೂ ಮುದ್ರಣ ಸೌಲಭ್ಯ ಹೊಂದಿರುವ ಮುದ್ರಣಕಾರರಿಗೆ ಸೀಮಿತಗೊಳಿಸಿ ಅನುಷ್ಠಾನಗೊಳಿಸತಕ್ಕದ್ದು.

2022-23ನೇ ಸಾಲಿಗೆ 01 ರಿಂದ 10ನೇ ತರಗತಿಯ ಸರ್ಕಾರಿ ಮತ್ತು ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ಖರೀದಿಸಿ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸರಬರಾಜು ಮಾಡಲು ಕ್ರಮವಹಿಸತಕ್ಕದ್ದು.

ಪಠ್ಯಪುಸ್ತಕಗಳ ಕಾಗದ ಮತ್ತು ಮುದ್ರಣ ಗುಣಮಟ್ಟದಲ್ಲಿ ರಾಜಿಯಾಗದಂತೆ ಎಚ್ಚರವಹಿಸತಕ್ಕದ್ದು.

ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ನಿಗದಿಪಡಿಸತಕ್ಕದ್ದು ಹಾಗೂ ಅದರನ್ವಯ ಭರಿಸಲಾಗುವ ವೆಚ್ಚದ ವಿವರಗಳನ್ನು ಪ್ರತಿ ಮಾಹೆ ಹೊಸ ಡಿಜಿಟಲ್ ಸಪೋರ್ಟ್ ಸಿಸ್ಟಂ (ಅವಲೋಕನ) ತಂತ್ರಾಂಶದಲ್ಲಿ ಇಂದೀಕರಿಸತಕ್ಕದ್ದು.

ಸದರಿ ಕಾರ್ಯಕ್ರಮದ ಅಡಿಯಲ್ಲಿ ಖರೀದಿಗಳಿಗೆ ಸಂಬಂಧಿಸಿದಂತೆ ಎಲ್ಲಾ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999 ಮತ್ತು ಅದರಡಿಯಲ್ಲಿ ಹೊರಡಿಸಲಾದ ನಿಯಮಗಳನ್ನು ಚಾಚೂ ತಪ್ಪದೇ ಕಡ್ಡಾಯವಾಗಿ ಹಾಗೂ ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 509 ಇ ಎಕ್ಸ್ ಪಿ -8/2021, ದಿನಾಂಕ:23.11.2021 ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್.ಡಿ 01 ಟಿ.ಎಫ್.ಪಿ 2021 ದಿನಾಂಕ:30.09.2021ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಆರ್.ಎಸ್.ನಾಥನ್) 22.12.2021
ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ

<u>ಇವರಿಗೆ,</u>

1. ಮಹಾಲೇಖಪಾಲರು, (ಆಡಿಟ್ 1 & 2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
4. ಅಪರ ಆಯುಕ್ತರು, ಧಾರವಾಡ ಮತ್ತು ಕಲಬುರಗಿ ವಿಭಾಗ.

Scanned with CamScanner

Scanned with CamScanner